ಪಿ.ಜೆ. ರಾಘವೇಂದ್ರ, ಮೈಸೂರು

*ವಾರ್ತೆಯನ್ನು ನಾಯಕ-ನಾಯಕಿ ಜೊತೆಯಾಗಿ ಓದುವುದು ಏಕೆ?*



ನಾಯಕ ತನ್ನ ಶಿಷ್ಟ ಭಾಷೆಯಿಂದ, ನಾಯಕಿ ತನ್ನ ಹಳ್ಳಿ ಭಾಷೆಯಿಂದ ಎಲ್ಲ ವರ್ಗದ ಜನಗಳನ್ನು ತಲುಪಲು.

ಆರ್. ಮಧುಸೂದನ್, ಹಾಸನ

*ಡಾ. ರಾಜ್‌ಕುಮಾರ್‌ರವರು ಅಭಿಮಾನಿಗಳನ್ನು ದೇವರು ಎಂದು ಕರೆದದ್ದೇಕೆ?*

ಬೇಡರ ಕಣ್ಣಪ್ಪನಾಗಿ ಬಂದವನನ್ನು ಬೇಡ ಎಂದು ತಿರಸ್ಕರಿಸದೆ 'ನೀನು ನಮ್ಮ ಕಣ್ಣು ಕಣಪ್ಪ ಕಣ್ಣಪ್ಪ' ಎಂದು ಸ್ವೀಕರಿಸಿದ್ದರಿಂದ.

ಸರಸ್ವತಿ ಮೂರ್ತಿ, ಬೆಂಗಳೂರು

*ಈಗ ಸಾಕಷ್ಟು ಹೆಣ್ಣುಮಕ್ಕಳು ಕುಡಿಯುತ್ತಿರುವುದರಿಂದ ಪಾರ್ಟಿಯನ್ನು ಕಾಕ್‌ಟೈಲ್ ಅನ್ನದೆ ಹೆನ್‌ಟೈಲ್ ಪಾರ್ಟಿ ಎನ್ನಬಹುದೆ?*

ಜೊತೆಗೆ ಮಕ್ಕಳೂ ಕುಡಿಯುತ್ತಾರಲ್ಲ! ಕಾಕ್, ಹೆನ್, ಚಿಕನ್ ಎಲ್ಲವೂ ಸೇರಿದ ಪಾರ್ಟಿಯಾದ್ದರಿಂದ ಪೌಲ್ಟ್ರಿ ಪಾರ್ಟಿ ಅಂದುಬಿಡಿ!

ಅಂದಾನಯ್ಯ ತಿಗರಿಮಠ, ಅಳವಂಡಿ

*ಕೆಇಬಿ ಬಿಲ್ ಬರುವಂತೆ ಸೂರ್ಯನ ಬೆಳಕಿಗೂ ಬಿಲ್ ಬಂದರೆ?*




ಕರೆಂಟ್ ಕದಿಯುವಂತೆಯೇ ನೆರೆಮನೆಯ/ರಸ್ತೆಯ ಮೇಲೆ ಬಿದ್ದ ಸೂರ್ಯನ ಬೆಳಕನ್ನು ಕನ್ನಡಿಯಿಟ್ಟು ಪ್ರತಿಬಿಂಬಿಸಿ ಕದಿಯುತ್ತಿದ್ದರು.

ಆರ್.ಸಿ. ಪರಶುರಾಮ್, ಶಿಕಾರಿಪುರ

*ನೀರಿನಿಂದ ಕರೆಂಟ್ ಉತ್ಪತ್ತಿಯಾದರೂ ನೀರಿಗೂ, ಕರೆಂಟ್‌ಗೂ ಆಗಿಬರುವುದಿಲ್ಲವಲ್ಲ, ಯಾಕೆ?*

ನೀರಮ್ಮನಿಗೂ, ಕರೆಂಟ್ ಪುತ್ರಿಗೂ ಇರುವ ಜನರೇಷನ್ ಗ್ಯಾಪ್!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಪೊರಕೆಗೆ ಲಕ್ಷ್ಮಿ ಎನ್ನುವವರಲ್ಲ, ಏಕೆ ಸಾರ್?*

ಗುಡಿಸಿದ ಜಾಗವನ್ನು ಲಕಲಕಿಸುವಂತೆ ಆಗಿಸಿ ಸ್ಮೇರ ಮೂಡುಸುವುದೇ ಲಕ್ಮೇ ಅಥವಾ ಲಕ್ಷ್ಮಿ ಅಥವಾ ಲಕ್ಷ್ಮಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಅಭ್ಯಾಸಕ್ಕೂ, ಚಟಕ್ಕೂ ವ್ಯತ್ಯಾಸ?*

ತನ್ನನ್ನು ಹೊಗಳಿಕೊಳ್ಳುವುದು ಅಭ್ಯಾಸ. ಇತರರನ್ನು ಟೀಕೆ ಮಾಡುವುದು ಚಟ.

ಎಚ್.ಜಿ. ಜಗದೀಶ್, ಮೈಸೂರು

*ನಿಮ್ಮ ಕೆಲವು ಉತ್ತರಗಳು 'ಪ್ರಾಕ್ಟಿಕಲ್' ಆಗಿರುವುದಿಲ್ಲವಲ್ಲ, ಏನು ಮಾಡುವುದು ರಾಂಜಿ?*

ನೂರು ವರ್ಷ ಹಿಂದೆ ಚಂದ್ರಯಾನ ಪ್ರಾಕ್ಟಿಕಲ್ ಎನಿಸಿರಲಿಲ್ಲ..

ಪ್ರೊ. ಒಡೆಯರ್. ಡಿ. ಹೆಗಡೆ, ಮೈಸೂರು

*ಸಿನಿಮಾ ಕಲಾವಿದರ ತೆರೆಯ ಮೇಲಿನ ನಟನೆಗೂ, ತೆರೆಯ ಹಿಂದಿನ ನಟನೆಗೂ ನಡುವಿನ ವ್ಯತ್ಯಾಸವೇನು?*

ತೆರೆಯಮೇಲೆ ಉದಾರ. ತೆರೆಯ ಹಿಂದೆ ಉದಾಸ.

ಜಾಕೋಬ್ ಡಿಸೋಜ, ಕುರುವಳ್ಳಿ

*ಜನ ದೇವರಿಗೆ ಏಕವಚನದಿಂದ ಏಕೆ ಕರೆಯುತ್ತಾರೆ?*

ಇರುವುದೇ ಒಬ್ಬನಲ್ಲವೇ! ಒಂದು ಮಾತ್ರ ಇರುವುದಕ್ಕೆ ಏಕವಚನ ಎನ್ನುತ್ತದೆ ವ್ಯಾಕರಣ.

ಸುನಂದಾ ಲೋಕೇಶರೆಡ್ಡಿ, ದಾವಣಗೆರೆ

*ಕಲಿತ ಹುಡುಗಿ ಕುದುರೆ ನಡಿಗೆ ಹಾಕುತ್ತ ಬರುತ್ತಿ ಅಂತಾರೆ. ಹಾಗಾದರೆ ಕಲಿತ ಹುಡುಗ?*

ಕುದುರೀ ಬಾಲಕ ರೊಕ್ಕವ ತುಂಬಿ ಅಳುತಲೆ ನಿಂತಿತ್ತ! ಪೆಚ್ಚಾಗ್ಹೋಗಿತ್ತ!

ಎಂ.ಜಿ. ರಾಮಚಂದ್ರ, ಮಂಡಗಳಲೆ

*ಶಾಲೆಗಳಲ್ಲಿ ಕನ್ನಡವು ಒಂದು ಭಾಷೆಯಾಗಬೇಕೋ, ಮಾಧ್ಯಮವಾಗಬೇಕೋ?*

ನಮ್ಮ ಮಾಧ್ಯಮದವರ ಭಾಷೆ ಕೇಳಿಯೂ ಮಾಧ್ಯಮ ಆಗಲಿ ಎನ್ನಲು ಧೈರ್ಯ ಬಾರದು. ಭಾಷೆಯೇ ಆಗಲಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸರ್ಕಾರಿ ಕಚೇರಿಯಲ್ಲಿ ಸೊಳ್ಳೆ ಹೊಡೆದುಕೊಂಡು ಕೂಡುವುದು ಅಂದರೆ ಏನು ಅರ್ಥ?*

ಕ್ಷಮಿಸಿ. ಅದು ಪ್ರಿಂಟಿಂಗ್ ಮಿಸ್ಟೇಕ್. ಸೊ ಇರುವ ಕಡೆ ಕೊ ಎಂದು ಓದಿಕೊಳ್ಳಿ.

## ಬಹುಮಾನಿತ ಪ್ರಶ್ನೆ

ರೀಟಾಂಜನಿ ಹೆಚ್.ಎಮ್. ಹಿರಿಯೂರು

*ಹೆಂಡತಿಗೆ ಧರ್ಮಪತ್ನಿ ಎಂದು ಸಂಭೋದಿಸುವ ಹಾಗೆ ಗಂಡನಿಗೆ ಧರ್ಮಪತಿ ಎಂದು ಸಂಭೋದಿಸುವುದಿಲ್ಲವಲ್ಲ, ಏಕೆ?*

ಧರ್ಮ ಎಂದರೆ ಉತ್ಪಾತ ಎಂದರ್ಥವಲ್ಲವೇ! ಉತ್ಪಾತ ಹೆಣ್ಣಿನ ಪ್ರಮುಖ ಲಕ್ಷಣ.

ಸುಮಾ ರಮೇಶ್, ಹಾಸನ

*ವಿಧೇಯರಾಗಿದ್ದ ಹೆಣ್ಣುಮಕ್ಕಳೆಲ್ಲಾ ಇತ್ತೀಚೆಗೆ ಎಲ್ಲದಕ್ಕೂ 'ಮೈ ಚಾಯ್ಸ್' ಎನ್ನಲು ಶುರುವಿಟ್ಟುಕೊಂಡಿರುವರಲ್ಲಾ?*

ಛೆ! ಅದ್ಯಾರೋ ಕೋಣೆ ಹೇಳಿದ ಮಾತನ್ನು ಕೇಳಿ ಜಾಣೆಯರೆಲ್ಲಾ ಕೋಣೆಯರಾಗುತ್ತಿದ್ದಾರೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಚಾಯ್‌ವಾಲಾ ಪ್ರಧಾನಿಗೂ ಒಂಬತ್ತು ಲಕ್ಷ ರೂಗಳ ಸೂಟ್‌ನ ಅಗತ್ಯವಿತ್ತೆ?*

ಛೆ! ಬೇಕಿದ್ದರೆ ಗುಪ್ತವಾಗಿ ಹಗರಣ ಮಾಡಿ ಕೋಟಿ ನುಂಗಲಿ. ಬಹಿರಂಗವಾಗಿ ದುಬಾರಿ ಖರ್ಚು ತೋರುವುದು ಮಹಾಪರಾಧ.

ಪ್ರದೀಪ ಚವ್ಹಾಣ, ಧಾರವಾಡ

*ಏಳು ಜನ್ಮ ಸಂತೋಷವಾಗಿ ಬಾಳು ಎಂದು ಆಶೀರ್ವದಿಸುತ್ತಾರಲ್ಲ, ನಿಜಕ್ಕೂ ಏಳು ಜನ್ಮ ಇರುತ್ತಾ?*



ಅವರು ಹೇಳುವುದು ಹಾಗಲ್ಲ. 'ಏಳು, (ಈ) ಜನ್ಮ ಸಂತೋಷವಾಗಿ ಬಾಳು' ಎಂದು.

ಪ್ರವೀಣ ಚವ್ಹಾಣ, ಗಂಗಾವತಿ

*ರಾಹುಲ ದ್ರಾವಿಡ ಅವರಿಗೂ, ಗೋಡೆಗೂ ಇರುವ ವ್ಯತ್ಯಾಸ?*

ರಾಹುಲ ಗೋಡೆ ಹತ್ತಿ ಕುಳಿತು ಎಷ್ಟಾದರೂ ಫೋಟೋ ತೆಗೆಸಿಕೊಳ್ಳಬಹುದು. ಗೋಡೆ ರಾಹುಲರ ಮೇಲಿದ್ದರೆ ಅದೇ ಲಾಸ್ಟ್ ಫೋಟೋ!

ಕೆ. ಭಾಸ್ಕರ ಮಕ್ಕಿತ್ತಾಯ, ಮಧುಗಿರಿ

*ಜನಿವಾರದವರು ಸಲೀಸಾಗಿ ಬೆನ್ನು ತುರಿಸಿಕೊಳ್ಳಬಹುದು. ಇಲ್ಲದವರು ಈ ಸೌಲಭ್ಯದಿಂದ ವಂಚಿತರಾಗುವರಲ್ಲ, ಅವರಿಗೆ ನಿಮ್ಮ ಸಾಂತ್ವನ?*

ಐಡೆಂಟಿಟಿ ಕಾರ್ಡ್‌ಗೆ ದಾರ ಕಟ್ಟಿ ಹಾಕಿಕೊಳ್ಳಿ. ನವೆಗೆ ದಾರ, ಕೊಳೆ ಕೆರೆದು ತೆಗೆಯಲು ಕಾರ್ಡ್ ಅನುಕೂಲವಾಗುತ್ತದೆ.

■ ರಾಮ್